ಕೂತರು. ನರ್ತನ ಪ್ರಾರಂಭವಾಗುವುದಕ್ಕೆ ತುಸು ಮೊದಲು ಪ್ರೇಕ್ಷಕರು ಬಯಸುವ ಪಾನೀಯಗಳ ಪಟ್ಟಿ ತಯಾರಾಗುತ್ತಿತ್ತು. ನಟರಾಜ್ ಬಿಯರ್‌ಗೆ ಆರ್ಡರ್ ಕೊಟ್ಟು ಸುತ್ತಮುತ್ತು ಎಚ್ಚರಿಕೆಯಿಂದ ಗಮನಿಸತೊಡಗಿದರು. ಜೇಬಿನಿಂದ ಫೋಟೊ ಹೊರತೆಗೆದು ಅದನ್ನು ಬೇರೆ ಬೇರೆ ಕೋನಗಳಿಂದ ವೀಕ್ಷಿಸಿದರು. ಪಕ್ಕದಲ್ಲಿದ್ದವರು ಅದನ್ನು ಗಮನಿಸಬೇಕೆಂಬ ಉದ್ದೇಶ ಅವರಿಗಿತ್ತು ಎಂಬುದನ್ನು ಪ್ರತ್ಯೇಕ ಹೇಳಬೇಕಿರಲಿಲ್ಲ.

ಸ್ವಲ್ಪ ಹೊತ್ತಿನಲ್ಲಿ ಪಾನೀಯ ಹೊತ್ತ ಬೇರರ್‌ಗಳು ಬರತೊಡಗಿದರು. ಎಲ್ಲ ಟೇಬಲ್‌ಗಳ ಸುತ್ತ ಒಬ್ಬೊಬ್ಬರು ಕಾಣಿಸಿಕೊಂಡರು. ನೋಡುತ್ತಿದ್ದಂತೆ ವಾದ್ಯಘೋಷ ಮೊಳಗತೊಡಗಿತು. ನರ್ತಕಿಯೊಬ್ಬಳು ಚಕಚಕನೆ ವೇದಿಕೆಯೇರಿ ಹೊಸ ಝಲಕ್ ಕೊಟ್ಟಳು. ಕುಳಿತಲ್ಲಿಂದ ಎದ್ದು ಆಕೆಯ ಕಡೆಗೆ ನೋಟುಗಳನ್ನು ಎಸೆಯುತ್ತಲೋ ಆಕೆಯನ್ನು ಮುಟ್ಟಲು ಹವಣಿಸುತ್ತಲೋ ಇದ್ದವರ ಹತ್ತಿರಕ್ಕೆ ಧಾವಿಸುತ್ತಿದ್ದ ದಾಂಡಿಗರು ಅವರನ್ನು ಹದ್ದುಬಸ್ತಿನಲ್ಲಿರುವಂತೆ ನೋಡಿಕೊಳ್ಳುತ್ತಿದ್ದರು. ಮಂದಬೆಳಕಿನಲ್ಲಿ ಯಾವ ಬೇರರ್ ಮುಖವೂ ಸ್ಪಷ್ಟವಾಗಲಿಲ್ಲ. ನಟರಾಜರಿಗೆ ಚಿಂತೆ ಹತ್ತಿತು. ನರ್ತನವಂತೂ ಗಮನಕ್ಕೆ ಬರಲೇ ಇಲ್ಲ. ಒಂದು ಪುಟ್ಟ ಘಟನೆ ನಡೆಯದೇ ಹೋಗಿರುತ್ತಿದ್ದರೆ ಮಾರನೆಯ ದಿನ ನಟರಾಜ್ ಅದೇ ಹೋಟೆಲಿಗೆ ಮತ್ತೆ ಬರುವ ಪ್ರಮೇಯವೇ ಇರುತ್ತಿರಲಿಲ್ಲ.

ಒಬ್ಬ ಬೇರರ್ ಕಿಚನ್‌ಗೆಂದು ಹೋಗಬೇಕಾದವ ಅದರ ಒತ್ತಿನ ಟಾಯ್ಲೆಟ್ ಬಾಗಿಲು ದೂಡಿದ. ಅದನ್ನು ಕಂಡ ಸೂಪರ್‌ವೈಸರ್ ಅವನನ್ನು ಚೆನ್ನಾಗಿ ಬೈದ. ಮಲೆಯಾಳ ಚೆನ್ನಾಗಿ ಬಾರದ್ದಕ್ಕೆ ನಟರಾಜ್, ತನ್ನೆದುರು ಕುಳಿತು ವಿಸ್ಕಿ ಹೀರುತ್ತಿದ್ದ ವ್ಯಕ್ತಿಯನ್ನು ಆತನ ಬೈಗುಳಿಗೆ ಕಾರಣವೇನೆಂದು ಇಂಗ್ಲಿಷಿನಲ್ಲಿ ವಿಚಾರಿಸಿಕೊಂಡರು. ಆತ ಹೇಳಿದ್ದರ ಸಾರಾಂಶವಿಷ್ಟೆ: 'ಬಂದು ವಾರವಾಗ್ತಾ ಬಂತು; ಇನ್ನೂ ಕಿಚನ್ ಯಾವುದು? ಟಾಯ್ಲೆಟ್ ಯಾವುದು? ಗೊತ್ತಾಗೋದಿಲ್ಲ ಬೇಕೂಫನಿಗೆ.'

ಆತ ಮತ್ತೊಮ್ಮೆ ಸರಬರಾಜಿಗೆಂದು ಬಂದಾಗ ನಟರಾಜ್ ಆತನ ಮುಖವನ್ನು ಚೆನ್ನಾಗಿ ವೀಕ್ಷಿಸಲು ಪ್ರಯತ್ನಪಟ್ಟರು. ಕುರುಚಲು ಗಡ್ಡದ ಆ ವ್ಯಕ್ತಿ ಚಾಕೊ ಇರಬಹುದೋ ಎಂದು ಮೂರು ಟೇಬಲ್‌ಗಳ ಆ ದೂರದಿಂದ ಸ್ಪಷ್ಟವಾಗಿ ಕಂಡುಕೊಳ್ಳುವುದಕ್ಕೆ ಸಾಧ್ಯವಾಗಲಿಲ್ಲ. ರಾತ್ರಿ ಹೊತ್ತು, ಜನನಿಬಿಡ ಹೋಟೆಲಿನಲ್ಲಿ ಕೆಲಸ ಕೆಟ್ಟೀತೆಂದು ಭಾವಿಸಿ ಮೆಲ್ಲನೆದ್ದು ಹೊರನಡೆದರು.

* * *

ಕೊನೆಗೂ ಪ್ಲಾಂಟರ್ ಚಂದ್ರಪ್ಪನವರು ಡಾಕ್ಟರ್ ಗಣೇಶ್‌ಗೆ ಬೇಲ್ ಕೊಡಿಸುವಲ್ಲಿ ಯಶಸ್ವಿಯಾದರು. ಪವನ್‌ಗಾಗಿ ಜಾಮೀನು ಕೊಡಲು ಯಾರೂ ಮುಂದೆ ಬರಲಿಲ್ಲ. ಅಂಥ ನಡುಹೊತ್ತಿನಲ್ಲೇ ನಟರಾಜರಿಗೆ ವೀರನಗರ ಪೊಲೀಸ್ ಸ್ಟೇಷನ್‌ನಿಂದ ಬುಲಾವ್ ಬಂದದ್ದು.

'ಸಾರ್, ಮೂವರದ್ದೂ ಫಾರೆನ್ಸಿಕ್ ಲ್ಯಾಬ್ ರಿಪೋರ್ಟ್ ಬಂದಿದೆ. ಡಾ. ಗಣೇಶ್ ಶೀಲಾಳನ್ನು ರೇಪ್ ಮಾಡಿದ್ದು ದೃಢಪಟ್ಟಿದೆ. ಆತನ ಬೇಲನ್ನು

## ಕಳೆದ ಸಂಚಿಕೆಯಲ್ಲಿ



ಶೀಲಾ ಹಾಗೂ ತನ್ನ ನಡುವೆ ಬಂದ ಪ್ರೊ. ಭಾಸ್ಕರ್ ಅವರನ್ನು ಕೊಲೆ ಮಾಡಲು ವಿಫಲ ಯತ್ನ ನಡೆಸಿದ್ದಾಗಿ ಪೊಲೀಸರ ಮುಂದೆ ಪವನ್ ಒಪ್ಪಿಕೊಂಡ. ಶೀಲಾಳ ಮನೆಯಿಂದ ಚಿನ್ನಾಭರಣಗಳನ್ನು ಕದ್ದಿರುವೆನೇ ಹೊರತು ಅತ್ಯಾಚಾರಕ್ಕೂ ಕೊಲೆಗೂ ತಾನು ಕಾರಣನಲ್ಲ ಎಂದು ಸ್ಪಷ್ಟವಾಗಿ ಹೇಳಿದ. ಪೊಲೀಸರ ಅನುಮಾನದ ಕಣ್ಣು ಒಬ್ಬರಿಂದ ಮತ್ತೊಬ್ಬರ ಮೇಲೆ ಹರಿಯತೊಡಗಿತು. ಡಾ. ಗಣೇಶ್ ಕೂಡ ವಿಚಾರಣೆ ಎದುರಿಸಬೇಕಾಯಿತು. ಆ ರಾತ್ರಿ ಶೀಲಾ ಒಬ್ಬಳೇ ಇದ್ದಾಗ ಅವಳ ಮನೆಗೆ ಹೋಗಿದ್ದಾಗಿಯೂ, ತಾನವಳನ್ನು ಪ್ರೀತಿಸುತ್ತಿದ್ದ ವಿಷಯ ತಿಳಿಸಿದಾಗ ಶೀಲಾ ಭಾವುಕಳಾಗಿದ್ದನ್ನು ಗಣೇಶ್ ಹೇಳಿದರು. ಅನಿರೀಕ್ಷಿತವಾಗಿ ಯಾರೋ ಬಾಗಿಲು ತಟ್ಟಿದ್ದರಿಂದಾಗಿ ಹಿಂಬಾಗಿಲಿನಿಂದ ಓಡಿ ಹೋದುದಾಗಿ ಡಾ. ಗಣೇಶ್ ಹೇಳಿದ್ದನ್ನು ಪೊಲೀಸರು ಅನುಮಾನಿಸಿದರು. ಪೊಲೀಸರ ತನಿಖೆಯ ಬಗ್ಗೆ ಪ್ರೊ. ಭಾಸ್ಕರ್ ಅಸಮಾಧಾನ ವ್ಯಕ್ತಪಡಿಸಿದರು. ದೀಪುವನ್ನು ಪತ್ತೆ ಹಚ್ಚದೆ ಅಮಾಯಕರಾದ ಡಾ. ಗಣೇಶ್‌ರನ್ನು ಪೊಲೀಸರು ಬಂಧಿಸಿದ್ದಾರೆಂದು ಭಾಸ್ಕರ್ ಭಾವಿಸಿದ್ದರು. ಅದೇ ಸಮಯಕ್ಕೆ ದೀಪು ಬಗ್ಗೆ ಪೊಲೀಸರಿಗೆ ಸುಳಿವು ದೊರೆಯಿತು. ಕೆಲವು ವರ್ಷಗಳ ಹಿಂದೆ, ಲಾಡ್ಜ್‌ನಲ್ಲಿನ ಗಂಡುಗಳಿಗೆ ಹೆಣ್ಣುಗಳನ್ನು ಹೊಂದಿಸಿ ಕೊಡುವ ಕೆಲಸವನ್ನು ದೀಪು ಮಾಡುತ್ತಿದ್ದುದು ತಿಳಿಯಿತು.

ರದ್ದುಪಡಿಸಿ ಪುನಃ ನಮ್ಮ ವಶಕ್ಕೆ ಒಪ್ಪಿಸಬೇಕೆಂದು ಮಾನ್ಯ ನ್ಯಾಯಾಧೀಶರನ್ನು ಕೇಳಿಕೊಳ್ತೇವೆ. ನೀವು ಎಲ್ಲಿದ್ದರೂ ಹಿಂದಿರುಗಿ' ಡಿಎಸ್‌ಪಿ ಪುಟ್ಟಸೋಮೇಗೌಡರು ನಿರಾಳವಾಗಿ ನುಡಿದರು.

'ಡಾ. ಗಣೇಶ್ ರೇಪ್ ಮಾಡಿರಬಹುದು ಗೌಡರೇ. ಆದರೆ ಕೇಸ್ ಅಷ್ಟಕ್ಕೇ ಮುಗಿಯೋದಿಲ್ಲ. ಅದಕ್ಕಿಂತ ಮುಖ್ಯವಾದದ್ದು ಕೊಲೆಗಡುಕನನ್ನು ಹಿಡಿಯೋದು.'

'ರೇಪ್ ಮಾಡಿದವನೇ ತನ್ನ ಗುಟ್ಟು ರಟ್ಟಾಗದಂತೆ ನೋಡಿಕೊಳ್ಳಲು ಶೀಲಾಳನ್ನು ಕೊಲೆ ಮಾಡಿದ್ದಾನೆ ಅನ್ನೋದರಲ್ಲಿ ನಮಗೆ ಯಾವುದೇ ಸಂಶಯ ಉಳಿದಿಲ್ಲ. ನೀವು ಮರಳಿ ಬನ್ನಿ ಸರ್. ಅವ್ನ ಬಾಯಿ ಬಿಡಿಸೋದನ್ನು ನೀವೇ ನೋಡುವಿರಂತೆ.'

'ಅಷ್ಟೊಂದು ಅವಮಾನವನ್ನು ಮೈದುಂಬಿಕೊಂಡ ದೀಪೂವನ್ನು ವಿಚಾರಣೆಯಿಲ್ಲದೆ ಬಿಟ್ಟು ಬಿಡೋದನ್ನು ನಾನೊಪ್ಪಲಾರೆ. ಅವನನ್ನು ಹಿಡಿದರೇನೇ ನಮ್ಮೆಲ್ಲರ ಪ್ರಯತ್ನಕ್ಕೊಂದು ತಾತ್ವಿಕ ಮುಕ್ತಾಯ ಲಭಿಸೋದು. ಆತನಿರುವ ಊರಲ್ಲೇ ಇದ್ದೇನೆ ನಾನು. ಅವನ ಸಮೇತ ಬರ್ತೇನೆ ಡಿಎಸ್‌ಪಿ ಸಾಬ್'. ಮರುಮಾತಿಗೆ ಕಾಯದೆ ನಟರಾಜ್ ಫೋನಿಟ್ಟರು.

'ಸಾರ್ ಸಾರ್' ಡಿಎಸ್‌ಪಿಪುಟ್ಟಸೋಮೇಗೌಡರು ಇನ್ನೇನೋ ಮಾತನಾಡುವವರಿದ್ದರು. ನಟರಾಜ್ ಫೋನ್ ಕೆಳಗಿಟ್ಟದ್ದ್ಯಾಕೆ? ನಮ್ಮ ಅನ್ವೇಷಣೆಯಲ್ಲಿ ಅವರಿಗೆ ತೃಪ್ತಿಯಿಲ್ಲವೆ? ಮನಸ್ಸಿನಲ್ಲೇ ಯೋಚಿಸತೊಡಗಿದರು. ಇದನ್ನೆಲ್ಲ ಗಮನಿಸುತ್ತಿದ್ದ ಇನ್ಸ್‌ಪೆಕ್ಟರ್,

'ನೀವ್ಯಾಕೆ ಸಾರ್ ಅವರ ಬಗ್ಗೆ ತಲೆಕೆಡಿಸ್ಕೋತೀರಾ? ಅವರು ಬಂದರೆಷ್ಟು ಬಿಟ್ಟರೆಷ್ಟು. ಅವ್ರೇನು ಇಲ್ಲಿ ಶಾಶ್ವತಾನಾ? ಅವರು ಪ್ರೊ. ಭಾಸ್ಕರರ ಕುರಿತ ಯಾವುದೋ ಅನ್ವೇಷಣೆಗಾಗಿ ಬಂದವರೂಂತಲ್ವೆ ಹೇಳಿದ್ದು. ದೀಪೂ ಪ್ರೊಫೆಸರ್‌ರ ಮನೆಯಲ್ಲಿ ಕೆಲ್ಸಕ್ಕಿದ್ದವ ಅಲ್ವೆ? ಅವನಿಂದ ನಟರಾಜ್ ಸರ್‌ಗೆ ಏನೋ ಕೆಲವು ವಿಚಾರಗಳು ತಿಳೀಬೇಕಾಗಿದೆ. ಅವ್ರ ಕೆಲಸ ಮುಗಿಸ್ಕೊಂಡು ದೆಹಲಿಗೆ ಹೊರಟೋಗ್ತಾರೆ. ಇಲ್ಲಿರೋರು ನಾವು. ನಮ್ಮ ಕೆಲಸ ನಾವೇ ಮಾಡ್ಬೇಕು. ಅಲ್ವೇ ಸಾರ್' ಎನ್ನುತ್ತಾ ನ್ಯಾಯಾಧೀಶರ ಬಳಿಗೆ ಹೊರಡಲು ಬೇಕಾದ ಫೈಲುಗಳನ್ನು ಸಿದ್ಧಪಡಿಸತೊಡಗಿದರು.

* * *

ಮಾರನೆಯ ದಿನ ಮಧ್ಯಾಹ್ನದ ಊಟಕ್ಕೆ ನಟರಾಜರು ಮತ್ತೆ ಅದೇ ಹೋಟೆಲಿಗೆ ಬಂದು ಆ ಕುರುಚಲು ಗಡ್ಡದ ವ್ಯಕ್ತಿ ಹಿಂದಿನ ರಾತ್ರಿ ಸರಬರಾಜು ಮಾಡುತ್ತಿದ್ದ ಟೇಬಲ್‌ಗೆ ಬಂದು ಕುಳಿತರು. ಮಧ್ಯಾಹ್ನವಾದ್ದರಿಂದಲೊ ಏನೊ ಹೆಚ್ಚು ರಶ್ ಇರಲಿಲ್ಲ. ಎದುರುಗಡೆ ಬಂದು ನಿಂತ ಬೇರರ್‌ನ ಬೋಳು ಮುಖ ನೋಡಿದಾಗ ನಟರಾಜ್‌ರಿಗೆ ಎದ್ದು ಹೋಗೋಣವೇ ಅನ್ನಿಸಿತು. ಆ ಹೊತ್ತಿಗೆ ಒಬ್ಬಾಕೆ ನರ್ತಕಿ ಒನಪು ವಯ್ಯಾರಗಳೊಂದಿಗೆ ಅವರಿದ್ದ ಕಡೆಗೇ ಬಂದು, 'ಮೆ ಐ ಸಿಟ್ ಡೌನ್ ಸರ್' ಎಂದಳು. 'ಓ ಯಸ್' ಎಂದರು ನಟರಾಜ್. ಆ ಹೋಟೆಲಿನ ಬಗ್ಗೆ ಗೊತ್ತಿರುವ ಒಬ್ಬರ ಅಗತ್ಯ ಅವರಿಗಿತ್ತು. ತನಗೂ ಆಕೆಗೂ ಭೋಜನಕ್ಕೆ ಆರ್ಡರ್ ಕೊಟ್ಟು ಸುತ್ತಲೂ